**ಎಂ ವಿ ಸಿ 1189/2023 ಪಿಡಬ್ಲ್ಯೂ.2**

**ಸಾಕ್ಷಿಯನ್ನು ದಿ: 13.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಡಿ ಎಸ್ ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ವೈದ್ಯಕೀಯ ಕಡತ, ಒಂದು ಎಕ್ಸರೇ, ಓ ಪಿ ಕೇಸ್ ಶೀಟ್ ಮತ್ತು ಎಂ ಎಲ್ ಸಿ ಎಕ್ಸಟ್ರಾಕ್ಟ್ ನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 48 ರಿಂದ 51 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಡಿ ಜಿ ಎನ್ ವಕೀಲರಿಂದಃ**

ಅಪಘಾತ ಆದ ನಂತರ ಗಾಯಾಳವು ನೇರವಾಗಿ ನಮ್ಮ ಆಸ್ಪತ್ರೆಗೆ ಬಂದರು. ನಮ್ಮ ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಎಂ ಎಲ್ ಸಿ ನಮೂದು ಆಗಿದೆ. ಅಪಘಾತದ ಹಿನ್ನಲೆಯನ್ನು ನಮೂದು ಮಾಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಇಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕೇಸ್ ಶೀಟ್‌ನಲ್ಲಿ ಅಪಘಾತದ ಹಿನ್ನಲೆಯನ್ನು ನಮೂದು ಮಾಡಿಲ್ಲ. ಅಪಘಾತವು ಪಾಂಡವಪುರದ ಚಿನಕುರಳಿಯ ಜಮೀನಿನಲ್ಲಿ ನಡೆದಿದೆ ಎಂದು ಹೇಳಿದ್ದಾರೆ ಎಂದರೆ ಸರಿ. ಗಾಯಾಳುವು ನಮ್ಮ ಆಸ್ಪತ್ರೆಗೆ ಸಂಜೆ ಸುಮಾರು 6.35 ಗಂಟೆಗೆ ಬಂದಿದ್ದಾರೆ. ಅಪಘಾತವು 1.45 ನಿಮಿಷಕ್ಕೆ ಆಯಿತು ಎಂದು ಎಂ ಎಲ್ ಸಿ ಯಲ್ಲಿ ನಮೂದು ಆಗಿರುತ್ತದೆ. ಬೇರೆ ಕಾರಣದಿಂದ ಗಾಯ ಮಾಡಿಕೊಂಡು ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆನಂತರ ಅವರು ನಮ್ಮ ಆಸ್ಪತ್ರೆಗೆ ಬಂದಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಯಾವುದೋ ಬೇರೆ ಕಾರಣದಿಂದ ಗಾಯಾಳುವು ಗಾಯಗೊಂಡಿದ್ದ ಸಮಯ ಮತ್ತು ಅವರು ನಮ್ಮ ಆಸ್ಪತ್ರೆಗೆ ಬಂದ ಸಮಯದ ನಡುವೆ ಸುಮಾರು 5 ಗಂಟೆಗಳ ವ್ಯಾತ್ಯಾಸ ಇರುವುದರ ಉಪಯೋಗ ಪಡೆದುಕೊಂಡು ಗಾಯಾಳುವು ನೇರವಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದಾರೆ ಎಂದು ದಾಖಲೆಗಳನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಗಾಯಾಳುವಿಗೆ ನಮ್ಮ ಆಸ್ಪತ್ರೆಯಲ್ಲಿ ಕೇವಲ ಕನ್ಸರ್ ವೇಟಿವ್ ಟ್ರೀಟ್ ಮೆಂಟ್

ನೀಡಿದ್ದೇವೆ ಎಂದರೆ ಸರಿ. ಶಸ್ತ್ರ ಚಿಕಿತ್ಸೆ ನಡೆಸುವಂತಹ ಗಾಯಗಳು ಅವರಿಗೆ ಆಗಿರಲಿಲ್ಲ ಎಂದರೆ ಸರಿ. ಕೇಂದ್ರ ಸರ್ಕಾರದ 2024 ರ ಮಾರ್ಗಸೂಚಿ ಅನುಸಾರ ಗಾಯಾಳುವಿನ ಅಂಗನ್ಯೂನತೆ ಪ್ರಮಾಣವನ್ನು ಲೆಕ್ಕ ಮಾಡಿದ್ದೇನೆ. medial malleolus ಗೆ ಸಂಬಂಧಿಸಿದಂತೆ ಶಸ್ತ್ರ ಚಿಕಿತ್ಸೆ ಆಗದೆ ಇರುವ ಕಾರಣ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಯಾವುದೇ ಅಂಗ ನ್ಯೂನತೆ ಲೆಕ್ಕ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಯಾವುದೇ ರೀತಿಯ ನ್ಯೂನತೆ ಇಲ್ಲದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**